**ಓ.ಎಸ್. ನಂಃ 342/2019**

**ಪಿ.ಡಬ್ಲ್ಯೂಃ 1**

**ದಿನಾಂಕ 14.07.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ.ಕೆ.ಎನ್.ಎಸ್. ವಕೀಲರಿಂದಃ**

1. ನನ್ನ ತಂದೆಯ ಹೆಸರು ಸಣ್ಣಪ್ಪಾಜಿಗೌಡ ಎಂದರೆ ಸರಿ. ನನ್ನ ತಂದೆಯಾದ ಸಣ್ಣಪ್ಪಾಜಿಗೌಡರಿಗೆ ನಾವು ಒಟ್ಟು 5 ಜನ ಮಕ್ಕಳು. ದಾವಾ ಆಸ್ತಿಯು ಮೊದಲು ನನ್ನ ತಂದೆಯಾದ ಸಣ್ಣಪ್ಪಾಜಿಗೌಡರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯು ಮೊದಲು ನನ್ನ ಹೆಂಡತಿಯಾದ ಜವರಮ್ಮ ರವರ ಹೆಸರಿನಲ್ಲಿತು ಎಂದು ಸ್ವತಃ ನುಡಿದಿರುತ್ತಾರೆ. ನನ್ನ ಹೆಂಡತಿಯಾದ ಜವರಮ್ಮ ರವರಿಗೆ ದಾವಾ ಆಸ್ತಿಯು ನನ್ನ ತಂದೆಯಾದ ಸಣ್ಣಪ್ಪಾಜಿಗೌಡರವರಿಂದ ಬಂದಿರುತ್ತದೆ. ದಾವಾ ಆಸ್ತಿಯು ನನ್ನ ತಂದೆಯಾದ ಸಣ್ಣಪ್ಪಾಜಿಗೌಡರವರಿಗೆ ತಮ್ಮ ತಂದೆಯಿಂದ ಬಂದಿದ್ದ ಪಿತ್ರಾರ್ಜಿತ ಆಸ್ತಿಯಾಗಿತ್ತು ಎಂದರೆ ಸರಿ.

2. ದಾವಾ ಆಸ್ತಿಯನ್ನು ನನ್ನ ಹೆಂಡತಿಯಾದ ಜವರಮ್ಮರವರಿಗೆ ಕೊಟ್ಟಿದ್ದ ಕಾರಣ ದಾವಾ ಆಸ್ತಿಯ ಸಂಬಂಧ ಸಣ್ಣಪ್ಪಜೇಗೌಡರ ಮಕ್ಕಳ ಮಧ್ಯ ಯಾವುದೇ ಪಾಲು ವಿಭಜನೆ ಆಗಿರುವುದಿಲ್ಲ. ನನ್ನ ತಂದೆ ಮತ್ತು ನನ್ನ ಸಹೋದರ ಸಹೋದರಿಯರು ಸೇರಿ 50 ರೂಪಾಯಿಯ ಛಾಪಾ ಕಾಗದದಲ್ಲಿ ತಮ್ಮ ಸಮ್ಮತಿಯನ್ನು ಲಿಖಿತ ರೂಪಾದಲ್ಲಿ ನೀಡಿದ್ದು, ಸದರಿ ಖಾತಾ ಒಪ್ಪಿಗೆ ಪತ್ರದ ಪ್ರಕಾರ ದಾವಾ ಆಸ್ತಿಯು ನನ್ನ ಹೆಂಡತಿಯಾದ ಜವರಮ್ಮ ರವರ ಹೆಸರಿಗೆ ವರ್ಗಾವಣೆ ಆಗಿರುತ್ತದೆ. 50 ರೂಪಾಯಿಯ ಛಾಪಾ ಕಾಗದದಲ್ಲಿ ಬರೆಸಿದ ಸದರಿ ಖಾತಾ ಒಪ್ಪಿಗೆ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

3. ನಾನು ಈ ದಾವೆಯನ್ನು ಹೂಡುವ ಪೂರ್ವದಲ್ಲಿ ಇದೇ ದಾವೆಯ 1 ನೇ ಪ್ರತಿವಾದಿಯಾದ ಮಲ್ಲಿಕಾರ್ಜುನರವರು ಇದೇ ದಾವೆಯ ಆಸ್ತಿಯಲ್ಲಿ ಪಾಲು ಕೇಳಿ ಕೆ

ಆರ್ ನಗರ ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 309/2018 ರಂತೆ ಪಾಲು ದಾವೆಯನ್ನು ಹೂಡಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು 1 ನೇ ಪ್ರತಿವಾದಿ ಹೂಡಿದ್ದ ಸದರಿ ಪಾಲು ದಾವೆಯ ನೋಟಿಸು ನನಗಾಗಲೀ ಅಥವಾ ನನ್ನ ಮಗಳಿಗಾಗಲೀ ಬಂದಿರುವುದಿಲ್ಲ ಹಾಗೂ ನಾನೇ ದಾವಾ ಆಸ್ತಿಯ ಸ್ವಾಧೀನದಲ್ಲಿನೆ ಎಂದು ಸ್ವತಃ ನುಡಿದಿರುತ್ತಾರೆ.

4. ಅಸಲು ದಾವೆ ಸಂಖ್ಯೆ 309/2018 ರ ದಾವೆಯಲ್ಲಿ ನಾನು ಇದೇ ದಾವೆಯ ವಕೀಲರಾದ ಕೆ.ಎಸ್ ದಿಲೀಪ್ ವಕೀಲರ ಮೂಲಕ ಹಾಜರಾಗಿ ನನ್ನ ಪ್ರತಿವಾದ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಈ ದಾವೆಯ 1 ನೇ ಪ್ರತಿವಾದಿ ಅಸಲು ದಾವೆ ಸಂಖ್ಯೆ 309/2018 ರ ದಾವೆಯನ್ನು ಹೂಡಿದ ನಂತರದಲ್ಲಿ ನೀವು ಈ ದಾವೆಯನ್ನು ಹೂಡಿರುತ್ತೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಪ್ರತಿವಾದಿಯರು ದಾವಾ ಆಸ್ತಿಗೆ ಬಂದು ತೊಂದರೆ ಕೊಟ್ಟ ಕಾರಣ ನಾನು ಈ ದಾವೆಯನ್ನು ಹೂಡಿರುತ್ತೇನೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯ ಖಾತೆಯು ನನ್ನ ಹೆಸರಿನಲ್ಲಿದ್ದರು ಸಹ ನಾನು ಮತ್ತು ನನ್ನ ಸಹೋದರರು ದಾವಾ ಆಸ್ತಿಯ ಪೈಕಿ ತಲಾ 10 ಗುಂಟೆ ಜಮೀನಿನ ಸ್ವಾಧೀನದಲ್ಲಿದ್ದು, ವ್ಯವಸಾಯ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

5. ಈ ದಾವೆಯ 1 ನೇ ಪ್ರತಿವಾದಿ ಸಲ್ಲಿಸಿದ್ದ ಅಸಲು ದಾವೆ ಸಂಖ್ಯೆ 309/2018 ರ ದಾವೆಯು ಡಿಕ್ರಿಯಾಗಿರುತ್ತದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಅಸಲು ದಾವೆ ಸಂಖ್ಯೆ 309/2018 ರ ದಾವೆಯ ಆದೇಶವನ್ನು ಪ್ರಶ್ನಿಸಿ ನಾನು ಮೇಲ್ಮನವಿಯನ್ನು ಹೂಡಿರುತ್ತೇನೆ ಎಂದು ಸಾಕ್ಷಿಯು ನುಡಿದಿರುತ್ತಾರೆ. ದಾವಾ ಆಸ್ತಿಯು ನನ್ನ ಮತ್ತು ಪ್ರತಿವಾದಿಯರ ಜಂಟಿ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸಂಬಂಧ ನಾನು ವಾದಿಯರ ಜಂಟಿ ಸ್ವಾಧೀನಕ್ಕೆ ತೊಂದರೆ ನೀಡಿದ ಕಾರಣ ಪ್ರತಿವಾದಿಯರು ನನ್ನ ವಿರುದ್ಧ ಸಾಲಿಗ್ರಾಮ ಪೋಲಿಸ್ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಪ್ರತಿವಾದಿಯರು ದಾವಾ ಆಸ್ತಿಯ ಜಂಟಿ ಸ್ವಾಧೀನದಲ್ಲಿ ಇರುವ ಸತ್ಯ ವಿಷಯ ನನಗೆ ಗೊತ್ತಿದ್ದರು ಸಹ ನಾನು ಪ್ರತಿವಾದಿಯರ ಸ್ವಾಧೀನಕ್ಕೆ ಅಡ್ಡಿಪಡಿಸುವ ದುರುದ್ದೇಶದಿಂದ ಈ ಸುಳ್ಳು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಅಸಲು ದಾವೆ ಸಂಖ್ಯೆ

309/2018 ರ ದಾವೆಯಲ್ಲಿ ಆದ ಆದೇಶದ ಪ್ರಕಾರ ಪ್ರತಿವಾದಿಯರು ದಾವಾ ಆಸ್ತಿಯ ಸ್ವಾಧೀನದಲ್ಲಿದ್ದರು ನಾನು ಪ್ರತಿವಾದಿಯರಿಗೆ ತೊಂದರೆ ಕೊಡುವ ಏಕೈಕ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**